ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಶುಕ್ರವಾರ, ೭ನೇ ಏಪ್ರಿಲ್ ೧೯೯೫ ಸಾಯನ ಸೌರ ಚೈತ್ರ (ಶಕ)
Friday, 7th April 1995 Sayana Sowra chithra (S.E.)

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ : ಬನ್ನೂರು ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಬೆಳೆದ ಕಬ್ಬಿನ ಸಾಗಾಣಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 194(1109)

ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಬನ್ನೂರು ವಿಧಾನ ಸಭಾ ಕ್ಷೇತ್ರದಲ್ಲಿ ಕಬ್ಬು ಹೇರಳವಾಗಿ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಈ ಕ್ಷೇತ್ರದ ಸುತ್ತಮುತ್ತ ಬೆಳೆದಿರುವ ಕಬ್ಬಿನ ಪ್ರಮಾಣವೆಷ್ಟು?

ಇ. ಈ ರೀತಿ ಬೆಳೆದಂತಹ ಕಬ್ಬನ್ನು ಪೂರ್ತಿಯಾಗಿ ಉಪಯೋಗಿಸಲು ರೈತರಿಗೆ ಸಾಧ್ಯವಾಗದೇ ಇರುವುದು ನಿಜವಲ್ಲವೇ?

ಈ. ಈ ರೀತಿ ಹೆಚ್ಚುವರಿ ಬೆಳೆದಂತಹ ಕಬ್ಬನ್ನು ಹೊರಗಡೆಗೆ ಸಾಗಿಸಲು ಸರ್ಕಾರ ಅನುಮತಿ ನೀಡುವುದೆ?

ಉ. ಸರ್ಕಾರವು ಇತರೇ ಸಕ್ಕರೆ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಹೆಚ್ಚುವರಿ ಕಬ್ಬನ್ನು ಹೊರಗಡೆ ಸಾಗಿಸಲು ಕ್ರಮ ಕೈಗೊಳ್ಳುವುದೆ?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು):

ಅ. ಬಂದಿರುವುದಿಲ್ಲ

ಆ. ಮೈಸೂರು ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಟಿ. ನರಸೀಪುರ ತಾಲ್ಲೂಕಿನಲ್ಲಿ ಈ ಸಾಲಿನಲ್ಲಿ (1994-95) 1.69 ಲಕ್ಷ ಟನ್ ಕಬ್ಬು ಉತ್ಪಾದನೆ ಅಂದಾಜು ಮಾಡಲಾಗಿರುತ್ತದೆ.

ಇ. ನಿಜ. ಈ ವರ್ಷ ಬೆಲ್ಲದ ಬೆಲೆ ಕುಸಿದಿರುವ ಕಾರಣ ಬೆಲ್ಲ ತಯಾರಿಕೆಗೆ ಸ್ಥಾನಪಲ್ಲಟವಾಗುತ್ತಿದ್ದ ಕಬ್ಬಿನ ಪ್ರಮಾಣ ಬಹಳ ಕಡಿಮೆ ಆಗಿದೆ. ಹೀಗಾಗಿ ರೈತರು ಕಬ್ಬನ್ನು ಪೂರ್ತಿಯಾಗಿ ಉಪಯೋಗಿಸಲು ಆಗಿರುವುದಿಲ್ಲ.

ಈ. ಹೌದು.

ಉ. ಹೌದು.

ಶ್ರೀ ಎಸ್. ಕೃಷ್ಣಪ್ಪ : ಸನ್ಮಾನ್ಯ ಅಧ್ಯಕ್ಷರೇ, ಪ್ರಶ್ನೆಯಲ್ಲಿ ನನ್ನ ಕ್ಷೇತ್ರದಲ್ಲಿ ಈಗಾಗಲೇ ಕಬ್ಬು ಹೇರಳವಾಗಿದೆ. ಅದರ ಬಗ್ಗೆ ನಮಗೇನೂ ವರದಿ ಬಂದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಇದರ ಬಗ್ಗೆ ಬಹುಶಃ ಈಗಾಗಲೇ ತರಿಸಿಕೊಂಡಿದ್ದರೆ ಚೆನ್ನಾಗಿ ಇರುತ್ತಿತ್ತು ಎನ್ನತಕ್ಕಂತಹ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದು ಈಗಾಗಲೇ ಸುಮಾರು 1ಲಕ್ಷದ 69 ಸಾವಿರ ಟನ್ ಹೆಚ್ಚಿಗೆ ಕಬ್ಬು ಅಲ್ಲಿ ದೊರೆಯುತ್ತದೆ ಎಂದು ಹೇಳಿದ್ದಾರೆ. ಮತ್ತೆ ಅವರ ಉತ್ತರದಲ್ಲಿ ಕಬ್ಬನ್ನು ಹೊರಗಡೆಗೆ ಸಾಗಿಸಲಿಕ್ಕೆ ನಾವು ಅವಕಾಶ ಕೊಡುತ್ತೇವೆ ಎಂದು ಹೇಳಿದ್ದಾರೆ. ಈಗಾಗಲೇ ತಾವು ಏನಾದರೂ ಇದರ ಬಗ್ಗೆ ಹೊರಗಡೆ ಗೇಟ್‌ನಲ್ಲಿ ಅಂದರೆ ಸುಮಾರು 4 ವರ್ಷಗಳ ಹಿಂದೆ ನಮ್ಮ ಪಕ್ಕದ ಕಬ್ಬನ್ನು ತಮಿಳುನಾಡಿನ ಬಣ್ಣಾರಿ ಪೊನಿಸ್ಸು ಸಕ್ಕರೆ ಕಾರ್ಖಾನೆಗಳಿಗೆ ಒದಗಿಸುವಂತಹ ಒಂದು ಅವಕಾಶವನ್ನು ಸರ್ಕಾರ ಮಾಡಿಕೊಟ್ಟಿತ್ತು. ಈಗಾಗಲೇ ಇದರ ಬಗ್ಗೆ ಯಾವುದಾದರೂ ಸಕ್ಕರೆ ಕಾರ್ಖಾನೆಗಳಿಗೆ ಈಗ್ಗಾಗಲೇ ಸರ್ಕಾರದವರು ಕಾಂಟ್ಯಾಕ್ಟ್ ಮಾಡಿದ್ದಾರೆಯೇ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದರೆ ದಯವಿಟ್ಟು ಮಾನ್ಯ ಮಂತ್ರಿಗಳು ಅದನ್ನು ತಿಳಿಸುವುದು ಏಕೆಂದರೆ ನಮ್ಮಲ್ಲಿ ಈಗಾಗಲೇ ಕೇವಲ ಒಂದು ಒಂದೂವರೆ ತಿಂಗಳಿನಲ್ಲಿ ಕ್ರಷರ್ ಶುರು ಆಗುತ್ತದೆ. ಆದ್ದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಮೊದಲನೆ ಪ್ರಶ್ನೆಯಲ್ಲಿ ಅವರ ಕ್ಷೇತ್ರದ್ದು ಕೇಳಿದ್ದಾರೆ. ನಾವು, ತಾಲ್ಲೂಕುವಾರು ಎಷ್ಟೆಷ್ಟು ಕಬ್ಬನ್ನು ಬೆಳೆಯುತ್ತಿದ್ದಾರೆ ಎನ್ನತಕ್ಕಂತಹ ಮಾಹಿತಿಯನ್ನು ಕೊಟ್ಟಿದ್ದೇನೆ. 2ನೇ ಪ್ರಶ್ನೆ ಅವರು ಏನು ಕೇಳಿದ್ದಾರೆ ಅಂದರೆ 1 ಲಕ್ಷದ 69 ಸಾವಿರ ಟನ್ನು ಕಬ್ಬು ಏನು ಬೆಳೆದಿದೆ ಅದು ಹೆಚ್ಚಿಗೆ ಆಗಿದೆ ಎನ್ನತಕ್ಕಂತಹ ವಿಚಾರಗಳನ್ನು ಹೇಳಿದ್ದಾರೆ.

ಮಾನ್ಯ ಜಿಲ್ಲಾಧಿಕಾರಿಗಳೂ ಕೂಡ ಈ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಕಬ್ಬು ಎಲ್ಲೆಲ್ಲಿ ಹೆಚ್ಚು ಬೆಳೆದಿದ್ದಾರೋ ಅಂಥಹ ಕಡೆಗಳಲ್ಲಿ ಪಕ್ಕದ ಫ್ಯಾಕ್ಟರಿಯವರಿಗೆ ತೆಗೆದುಕೊಳ್ಳಲಿಕ್ಕೆ ಈಗಾಗಲೇ ಆದೇಶ ಮಾಡಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬನ್ನೂರು ಆ ಕ್ಷೇತ್ರದಲ್ಲಿರತಕ್ಕಂತಹ ಕಬ್ಬನ್ನು ಪಕ್ಕದ ಫ್ಯಾಕ್ಟರಿಗೆ ಅರೆಯಲಿಕ್ಕೆ ಕೊಟ್ಟಿದ್ದೇವೆ. ಈ ವರ್ಷದ ಬೆಲ್ಲದ ರೇಟು ಕಡಿಮೆ ಆಗಿರುವುದರಿಂದ ಸ್ವಲ್ಪ ತೊಂದರೆಯಾಗಿದೆ; ಅವರು ಹೇಳತಕ್ಕಂಥಹದ್ದು ನಿಜ ಇದೆ. ಸಾಧ್ಯವಾದಷ್ಟು ಕಬ್ಬನ್ನು ಅರೆಯಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಇದರ ಜೊತೆಗೆ ನಾವು ಬೇರೆ ರಾಜ್ಯಕ್ಕೆ ಕಳುಹಿಸಲಿಕ್ಕೆ ಈಗಾಗಲೇ ವ್ಯವಸ್ಥೆ ಮಾಡಿದ್ದೇವೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಸ್.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಅಲ್ಲೇ ಇರತಕ್ಕ ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಒಟ್ಟು ಸುಮಾರು 2-3 ತಿಂಗಳಿನಿಂದ ಈ ಫ್ಯಾಕ್ಟರಿಯವರು ಹಣವನ್ನು ಕೊಡುತ್ತಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕಿಂತ ನಮಗೆ ಇನ್ನೂ ಹೆಚ್ಚು ಕಬ್ಬನ್ನು ಹೊರಗಡೆ ಸ್ಪೇಟ್‌ಗೆ ಕಳುಹಿಸಲು ಅನುಮತಿ ಕೊಟ್ಟರೆ ಬಹುಶಃ ನಮ್ಮಲ್ಲಿರತಕ್ಕಂಥ ಕಬ್ಬು ಎಲ್ಲಾ ಹಾಳಾಗದಂತೆ ಎಲ್ಲವನ್ನೂ ಸಾಗಿಸಲಿಕ್ಕೆ ಅವಕಾಶವಾಗುತ್ತದೆ ಆದ್ದರಿಂದ ಆದಷ್ಟು ಜಾಗ್ರತೆ ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದೇನಗೌಡರ್ : ಸನ್ಮಾನ್ಯ ಅಧ್ಯಕ್ಷರೇ ಅವರನ್ನು ಕರೆಸಿ ಈವತ್ತೇ ಅದನ್ನು ಕೊಡಲಿಕ್ಕೆ ಆದೇಶ ಮಾಡುತ್ತೇನೆ.

Sub : Financial crisis in Town Municipalities.

Starred L.A. Question 196(1253)

Sri Vatal Nagaraj (Chamarajanagar) : Will the Minister for Urban Development CADA and Hyderbad-Karnataka Development Board be pleased to state

1. It is true that most of TMCS in Karnataka are facing financial crisis?

2. What action has been taken to improve the financial position of the TMCS.

Sri Vaijanath Patil (Minister for Urban Development, CADA and Hyderbad-Karnataka Devt. Board) :

1. Yes

1. 1. The Director of Municipal Administration, and the Deputy Commissioners have been instructed to periodically review the collection of taxes and other out-